# ಪೂರ್ವ- ಪಶ್ಚಿಮಗಳ ಸಮನ್ವಯ ಮೂರ್ತಿ ಸ್ವಾಮಿ ವಿವೇಕಾನಂದ

ಡಾ. ಪ್ರಭುಶಂಕರ

**ಪೂರ್ವ-ಪಶ್ಚಿಮ ಸಂಸ್ಕೃತಿಗಳಲ್ಲಿನ ಅತ್ಯಂತ ಶ್ರೇಷ್ಠವಾದ ಮೌಲ್ಯಗಳ ಸಂಗಮವನ್ನು ಸ್ವಾಮಿ ವಿವೇಕಾನಂದರ ಜೀವನ ಮತ್ತು ಬೋಧನೆಗಳಲ್ಲಿ ಗುರುತಿಸಿರುವ ಶ್ರೀ ಪ್ರಭುಶಂಕರರು ಹೆಸರಾಂತ ಸಾಹಿತಿಗಳೂ ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ನಿವೃತ್ತ ಪ್ರಾಧ್ಯಾಪಕರೂ ಆಗಿರುವರು.**

**ಮಾ**ನವ ಇತಿಹಾಸವು ಅನೇಕ ತೀಕ್ಷ್ಣಮತಿಗಳನ್ನು ಕಂಡಿದೆ. ಆದರೆ, ಅಂತಹ ಪ್ರಖರಮತಿಯೊಂದಿಗೆ ಸಾಗರದಷ್ಟು ವಿಶಾಲವಾದ ಜೀವಾನುಕಂಪೆಯನ್ನೂ ಹೊಂದಿದ್ದಂತಹ ವ್ಯಕ್ತಿಗಳನ್ನು ಕಂಡಿತ್ತೋ ಇಲ್ಲವೋ ಹೇಳುವುದು ಕಷ್ಟ. ಹೊಚ್ಚ ಹೊಸದಾದ ಚಿಂತನೆಗಳ ಪ್ರವಾಹದ ಜೊತೆಗೇ ಜೀವಿಗಳ ವಿಷಯದಲ್ಲಿ ಪ್ರೇಮದ ತರಂಗಗಳನ್ನು ಹೊಮ್ಮಿಸುತ್ತಿದ್ದ ವಿಶಿಷ್ಟ ವ್ಯಕ್ತಿತ್ವ ಸ್ವಾಮಿ ವಿವೇಕಾನಂದರದಾಗಿತ್ತು. ಇವುಗಳಿಗೆ ಕಿರೀಟಪ್ರಾಯವಾಗಿ ಇದ್ದದ್ದು ಎಂದರೆ ತಮ್ಮ ಬುದ್ಧಿ ಭಾವಗಳ ಶಕ್ತಿಸಮಸ್ತದ ಒಂದೊಂದು ಕಣವನ್ನೂ ಜೀವಿಗಳ ಕಷ್ಟನಿವಾರಣೆಗಾಗಿ ವಿನಿಯೋಗಿಸುವ ಸಂಕಲ್ಪಶಕ್ತಿ. ಅದನ್ನು ಕಾರ್ಯಗತಗೊಳಿಸುವಲ್ಲಿ ಜಾತಿ, ಮತ ಪಂಥ ವರ್ಣಗಳ ಮಾತಿರಲಿ ಅವರಿಗೆ ಯಾವ ಭೌಗೋಳಿಕ ಸೀಮಾರೇಖೆಗಳೂ ಇರಲಿಲ್ಲ.

ಸ್ವಾಮಿ ವಿವೇಕಾನಂದರು ಮುಖ್ಯವಾಗಿ ಸಮನ್ವಯ ಮೂರ್ತಿ. ಸರ್ವಧರ್ಮ ಸಮನ್ವಯಾಚಾರ್ಯ ಶ್ರೀರಾಮಕೃಷ್ಣ ಪರಮಹಂಸರ ಸಮನ್ವಯ ಮಂತ್ರವನ್ನು ಸ್ವೀಕರಿಸಿದುದು ಮಾತ್ರವಲ್ಲದೆ, ಅದರ ಅನುಷ್ಠಾನದಿಂದ ಇನ್ನೂ ಅನೇಕ ಸಮನ್ವಯ ಪಥಗಳನ್ನು ತೆರೆದದ್ದು ಆ ಧರ್ಮಸಾಹಸಿಗೆ ಮಾತ್ರ ಸಾಧ್ಯವಾಯಿತು. ಜ್ಞಾನ-ಕರ್ಮಗಳ, ಧ್ಯಾನ-ಸೇವೆಗಳ, ವಿಜ್ಞಾನ-ಧರ್ಮಗಳ, ಪರಮಾರ್ಥ-ಲೌಕಿಕಗಳ ಸಮನ್ವಯವು ವಿಶಾಲವಾದ ಅಧ್ಯಾತ್ಮದ ಕ್ರಿಯಾತ್ಮಕ ಹಿನ್ನೆಲೆಯಲ್ಲಿ ಸಾಧ್ಯ ಎಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಹಾಗೆಯೇ **ಪೂರ್ವ-ಪಶ್ಚಿಮಗಳ ಸಾಂಸ್ಕೃತಿಕ ಮೌಲ್ಯಗಳ ಸಮನ್ವಯವೂ ಸಾಧ್ಯ ಎಂಬುದಕ್ಕೆ ಅವರ ಜೀವನವು ಜ್ವಲಂತ ನಿದರ್ಶನವೂ ಆಯಿತು.**

## ಪದಗಳ ವಿವರಣೆ

ಮೊದಲು ಇಲ್ಲಿ ಬಳಸಿರುವ ಕೆಲವು ಪದಗಳ ವಿವರಣೆ ಅಗತ್ಯ. ಪೂರ್ವ ಎಂದರೆ ಭಾರತ, ಕೆಲವು ಆಗ್ನೇಯ ಏಷ್ಯಾ ದೇಶಗಳು, ಜಪಾನ್ ಮತ್ತು ಚೀಣಾ. ಪಶ್ಚಿಮ ಎಂದರೆ ಯೂರೋಪ್, ಉತ್ತರ ಮತ್ತು ದಕ್ಷಿಣ ಅಮೇರಿಕಗಳು. ಇನ್ನು ಸಂಸ್ಕೃತಿ ಎಂಬ ಪದ, ಅದರಷ್ಟು ವಿಶಾಲಾರ್ಥವುಳ್ಳದ್ದೂ ಗೊಂದಲಮಯವಾದ ವಿವರಣೆಗಳನ್ನು ಉಳ್ಳದ್ದೂ ಆದ ಮತ್ತೊಂದು ಪದ ಇರಲಾರದು. ಆದರೂ ಇಂಗ್ಲೆಂಡಿನ ಕವಿ, ಚಿಂತಕ ಮ್ಯಾಥ್ಯೂ ಆರ್ನಾಲ್ಡ್ ಸಂಸ್ಕೃತಿ ಎಂದರೆ ಏನು ಎಂಬುದನ್ನು ವಿವರಿಸಲು ಪ್ರಯತ್ನಿಸಿರುವುದನ್ನು ಸದ್ಯದ ವ್ಯವಹಾರಕ್ಕೆ ನಾವು ಬಳಸಿಕೊಳ್ಳಬಹುದು ಎಂದು ತೋರುತ್ತದೆ. ಆರ್ನಾಲ್ಡ್ ಹೇಳುತ್ತಾನೆ: "ಒಳ್ಳೆಯದನ್ನು ಮಾಡುವುದಕ್ಕೆ, ಸಹಾಯ



ಚಿಕಾಗೋದ Art Instituteನಲ್ಲಿರುವ ಫಲಕದ ಮೇಲಿರುವ ಬರಹ :

**"ಈ ಸ್ಥಳದಲ್ಲಿ 1893 ಸೆಪ್ಟಂಬರ್ 11ರಿಂದ 27ರವರೆಗೆ ಅಮೇರಿಕದಲ್ಲಿ ವೇದಾಂತವನ್ನು ಬೋಧಿಸಿದ ಪ್ರಥಮ ಹಿಂದೂಸಂನ್ಯಾಸಿಗಳಾದ ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಅವರ ಅಭೂತಪೂರ್ವ ಯಶಸ್ಸು ಪ್ರಾಚ್ಯ ಮತ್ತು ಪಾಶ್ಚಾತ್ಯ ಧರ್ಮಗಳ ನಡುವೆ ವಿಚಾರವಿನಿಮಯಕ್ಕೆ ದಾರಿ ಮಾಡಿಕೊಟ್ಟಿತು."**



ನೀಡುವುದಕ್ಕೆ, ಜನರ ದುಃಖವನ್ನು ಜನರಲ್ಲಿರುವ ದೋಷಗಳನ್ನು ನಿವಾರಿಸುವುದಕ್ಕೆ ನಮ್ಮಲ್ಲಿ ಕಾಣಿಸಿಕೊಳ್ಳುವ ಪ್ರವೃತ್ತಿಯೇ ಸಂಸ್ಕೃತಿ ಎಂದು ಹೇಳಬಹುದು. ಜನರಲ್ಲಿರುವ ಗೊಂದಲವನ್ನು ಕಡಿಮೆ ಮಾಡುವುದು, ನಾವು ಈ ಜಗತ್ತಿಗೆ ಬಂದಾಗ ಅದು ಇದ್ದ ಸ್ಥಿತಿಗಿಂತ ಉತ್ತಮವಾಗಿ ಅದನ್ನು ಮಾಡಬೇಕು ಎನ್ನುವುದು—ಈ ಉದಾತ್ತ ಆಶೋತ್ತರವನ್ನು ಸಂಸ್ಕೃತಿ ಎಂದು ಕರೆಯಬಹುದು. ಅದರ ಉಗಮ ಇರುವುದು ಪರಿಪೂರ್ಣತೆಯನ್ನು ಪ್ರೀತಿಸುವುದರಲ್ಲಿ. ಅದು ಪರಿಪೂರ್ಣತೆಯ ಅಧ್ಯಯನ. ಶುದ್ಧವಾದ ಜ್ಞಾನವನ್ನು ಸಂಪಾದಿಸಬೇಕು ಎಂಬ ತೀವ್ರವಾದ, ವಿಜ್ಞಾನಾಧಾರಿತವಾದ ಕಳಕಳಿಯಿಂದ ಮಾತ್ರವಲ್ಲದೆ, ಒಳ್ಳೆಯದನ್ನು ಮಾಡಬೇಕು ಎಂಬ ನೈತಿಕವೂ ಸಾಮಾಜಿಕವೂ ಆದ ಹಂಬಲದಿಂದಲೂ ಪ್ರೇರಿತವಾದ ಶಕ್ತಿ ಅದಕ್ಕೆ ಚಾಲನೆಯನ್ನು ನೀಡುತ್ತವೆ." (Mathew Arnold, *Culture and Anarchy*, Mac Millan and Co. Ltd. Calcutta 1942, p.2)

ಇನ್ನು "ಮೌಲ್ಯಗಳು" ಎಂದರೇನು? ಅದರ ವಿವರಣೆ ಕಷ್ಟತರವಾದದ್ದು. "ಮೌಲ್ಯಗಳೇ—ಭಯಂಕರ ವ್ಯಾಪಾರ! ಅದನ್ನು ವಿವರಿಸಲು ಹೊರಟರೆ, ಮಾತನಾಡಲು ಸಾಧ್ಯವಿಲ್ಲ, ನಾವು ತೊದಲಬಹುದು ಅಷ್ಟೆ" ಎಂದು ಕೈಕೊಡವಿಕೊಂಡುಬಿಟ್ಟ ವಿಟ್ಗೆನ್‌ಸ್ಟೀನ್ ಎಂಬ ಬ್ರಿಟಿಷ್ ತತ್ತ್ವಶಾಸ್ತ್ರಜ್ಞ.

ಸ್ವಲ್ಪವಾದರೂ ಸಮರ್ಪಕವಾಗಿ ವಿವರಣೆ ನೀಡಲು ಸಾಧ್ಯವಾದದ್ದು ರಿಚರ್ಡ್ ಆರ್. ಮೊರಿಲ್ ಎಂಬಾತನಿಗೆ. ಅವನು ಅದಕ್ಕೆ ಅನುಸರಿಸಿದ್ದು ವೇದಾಂತದ "ನೇತಿ, ನೇತಿ"—"ಇದಲ್ಲ, ಇದಲ್ಲ" ಎಂಬ ಮಾರ್ಗವನ್ನು. "ಮೌಲ್ಯಗಳು ಎಂದರೆ ನಂಬಿಕೆಗಳಲ್ಲ, ತೀರ್ಪುಗಳೂ ಅಲ್ಲ. ಅವು ತಮ್ಮನ್ನು ತಾವು ಅಭಿವ್ಯಕ್ತಗೊಳಿಸಿಕೊಳ್ಳುವುದು ಚಿಂತನೆಗಳಲ್ಲಿ, ಚಿಂತನೆಗಳ ಮೂಲಕ. ಅವು ಭಾವನೆಗಳಲ್ಲ, ಆದರೆ ಬಯಕೆಗಳು. ಇಂಥವೇ ಕೆಲಸಗಳು ಎಂದು ಅವನ್ನು ವರ್ಣಿಸಲಾಗದಿದ್ದರೂ ಅವು ಸ್ಪಷ್ಟವಾಗಿ ಗೋಚರವಾಗುವುದು ನಿರ್ದಿಷ್ಟವಾದ ಕಾರ್ಯಗಳ ಮೂಲಕವೇ. ತತ್ತ್ವಶಾಸ್ತ್ರಜ್ಞ ಕ್ಯಾಂಟ್ ಹೇಳಿರುವುದನ್ನು ಸ್ವಲ್ಪ ವಿಸ್ತರಿಸಿ ಸಂಕ್ಷೇಪವಾಗಿ ಹೇಳುವುದಾದರೆ 'ವಿಚಾರದ ಬೆಂಬಲವಿಲ್ಲದ ಮೌಲ್ಯಗಳು ಕುರುಡು, ಭಾವನೆಗಳ ಬೆಂಬಲವಿಲ್ಲದ ಅವು ಶಕ್ತಿಹೀನ, ಹಾಗೂ ಕ್ರಿಯೆಗಳಿಲ್ಲದ ಅವು ಶೂನ್ಯ.'" (Richard R. Morrill—*Teaching Values in A College*: Jossey Bass — San Francisco 1980, pp. 72-73)

ಸದ್ಯಕ್ಕೆ ಮೇಲಿನ ವಿವರಣೆಗಳ ಸಾರಾಂಶಗಳನ್ನು ಆಧರಿಸಿ ಸ್ವಾಮಿ ವಿವೇಕಾನಂದರು ಸಾಧಿಸಿದ ಪೂರ್ವ-ಪಶ್ಚಿಮ ದೇಶಗಳ ಮೌಲ್ಯಗಳ ಸಮನ್ವಯ ಯಾವ ಸ್ವರೂಪದ್ದು ಎಂಬುದನ್ನು ಪರಿಶೀಲಿಸಬಹುದು.

## ಸ್ವಾಮೀಜಿಯಲ್ಲಿ ಪೂರ್ವಪಶ್ಚಿಮಗಳ ಸಂಗಮ

ಭಾರತದಲ್ಲಿ ಸ್ವಾಮೀಜಿ ವಿಸ್ತಾರವಾಗಿ ಪರ್ಯಟನೆಯನ್ನು ಕೈಗೊಂಡರಷ್ಟೆ. ಆಗ ಅವರು ತಮ್ಮ ದೇಶಬಾಂಧವರ ಆರ್ಥಿಕ-ಸಾಮಾಜಿಕ ಸ್ಥಿತಿಗತಿಗಳನ್ನು ಮಾತ್ರವಲ್ಲದೆ ಸಾವಿರಾರು ವರ್ಷಗಳ ಕಾಲ ಅವರು ಪೋಷಿಸಿಕೊಂಡು ಬಂದ ಮೌಲ್ಯಗಳು ಯಾವುವು ಎಂಬುದನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರು. ಹಾಗೆಯೇ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಪಶ್ಚಿಮದಲ್ಲಿ ಅವರು ಪ್ರವಾಸ ಮಾಡಿದಾಗಲೂ ಅಲ್ಲಿನ ಜನರ ಜೀವನವನ್ನು ರೂಪಿಸಿದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಯಾವುವು ಎಂಬುದನ್ನು ಆಳವಾಗಿ ಅಧ್ಯಯನ ಮಾಡಿದರು. ಒಂದು ದೇಶದ ನಿಜವಾದ ಸತ್ವ ಹೊರಪದರದಲ್ಲಿ ಅದರ ಸಂಸ್ಕೃತಿಯಾಗಿಯೂ ಒಳಪದರದಲ್ಲಿ ಅದರ ಅಧ್ಯಾತ್ಮವಾಗಿಯೂ ಅಭಿವ್ಯಕ್ತವಾಗುತ್ತದೆ. ಸ್ವಾಮೀಜಿ ಭಾರತದ ಕಲಾಮಾಧ್ಯಮಗಳಾದ ಸಂಗೀತ, ಚಿತ್ರ, ಶಿಲ್ಪ ಮುಂತಾದವುಗಳ ವಿಷಯದಲ್ಲಿ ಎಂತಹ ಆಳವಾದ ಪಾಂಡಿತ್ಯವನ್ನು ಸಂಪಾದಿಸಿದ್ದರೋ ಅಷ್ಟೇ ಮಟ್ಟಿನ ಪಾಂಡಿತ್ಯವನ್ನು ಪಾಶ್ಚಾತ್ಯ ಕಲಾಮಾಧ್ಯಮಗಳ ವಿಷಯದಲ್ಲೂ ಸಂಪಾದಿಸಿದ್ದರು. ಭಾರತ ಮತ್ತು ಪಶ್ಚಿಮ ದೇಶಗಳ ಆಳವಾದ ಪರಿಚಯವನ್ನು ಪಡೆದುಕೊಂಡ ಸ್ವಾಮೀಜಿ ಪೂರ್ವ-ಪಶ್ಚಿಮಗಳ ಧರ್ಮ-ಸಂಸ್ಕೃತಿಗಳ ಶುದ್ಧ ಮೂರ್ತಸ್ವರೂಪದಂತೆ ಕಂಗೊಳಿಸಿದ್ದು ಸಹಜವಾಗಿಯೇ ಇದೆ. ಪೂರ್ವ-ಪಶ್ಚಿಮ ಜಗತ್ತುಗಳೆರಡನ್ನು, ಅವುಗಳ ಉತ್ತಮೋತ್ತಮ ಸಂಸ್ಕೃತಿ, ಚಿಂತನೆಗಳ ಸಾರಗಳೊಡನೆ ಒಂದೇ ತೆಕ್ಕೆಯಲ್ಲಿ ಎತ್ತಿಕೊಂಡು ತಮ್ಮದನ್ನಾಗಿಸಿಕೊಳ್ಳುವ ಶಕ್ತಿ ಅವರಲ್ಲಿತ್ತು.

> ಎರಡು ಸಂಸ್ಕೃತಿಗಳ (ಪೂರ್ವ-ಪಶ್ಚಿಮ) ನಡುವೆ ಯಥಾರ್ಥವಾದ ವಿಚಾರವಿನಿಮಯ ನಡೆಯಬೇಕು. ಅದರಲ್ಲಿ ಯಾವುದೇ ಅಭಿಮತಕ್ಕೂ ಅಂಟಿಕೊಳ್ಳಬಾರದು. ಹೀಗೆ ಮುಕ್ತವೂ ಪರಿವರ್ತನ ಶೀಲವೂ ಆದ ಸಾಮಾನ್ಯ ಮನಸ್ಸು ಉದ್ಭವಿಸಬಹುದು. *—ಕಾರ್ಲ್ ಯುಂಗ್*

## ಸಾಂಸ್ಕೃತಿಕ ದುರಭಿಮಾನ

ಪಶ್ಚಿಮ ರಾಷ್ಟ್ರಗಳಿಗೆ ತಾವು ಆಧ್ಯಾತ್ಮಿಕವಾಗಿಯೂ ಸಾಂಸ್ಕೃತಿಕವಾಗಿಯೂ ಇತರ ಎಲ್ಲ ದೇಶಗಳವರಿಗಿಂತಲೂ ಶ್ರೇಷ್ಠ ಎಂಬ ಭಾವನೆ ಅನೂಚಾನವಾಗಿ ಬೆಳೆದು ಬಂದಿತ್ತು. ಜೆ.ಜೆ. ಕ್ಲಾರ್ಕ್ ಎಂಬಾತನು ಈ ಭಾವನೆಗೆ ಮೂಲಪುರುಷ ಹೆಗೆಲ್ ಎನ್ನುವ ತತ್ತ್ವಜ್ಞಾನಿ ಎಂಬುದನ್ನು ತೋರಿಸಿದ್ದಾರೆ (J.J. Clarke: *Jung and Eastern Thought, A Dialogue with the Orient*, Routledge - London and New York, 1944, p.16). ಪೂರ್ವದ ಅಧ್ಯಾತ್ಮವನ್ನೂ, ಪಶ್ಚಿಮದ ವಿಚಾರಶೀಲತೆಯನ್ನೂ ಮೈಗೂಡಿಸಿಕೊಂಡಿದ್ದ ಸ್ವಾಮೀಜಿ ಸುಮಾರು ನೂರು ವರ್ಷಗಳಷ್ಟು ಹಿಂದೆಯೇ ಮೇಲಿನ ನಂಬಿಕೆ ಹುಸಿಯಾದದ್ದು ಎಂಬುದನ್ನು ತೋರಿಸಿಕೊಟ್ಟಿದ್ದರು. ಯಾವುದೇ ಸಂಸ್ಕೃತಿಯಾಗಲಿ, ಧರ್ಮವಾಗಲಿ, ಇತರ ಯಾವುದೇ ಧರ್ಮಕ್ಕಿಂತಲೂ, ಸಂಸ್ಕೃತಿಗಿಂತಲೂ ಉತ್ತಮವಾಗಿರುವುದು ಸಾಧ್ಯವೇ ಇಲ್ಲ ಎಂಬುದು ಅವರ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. (ನೋಡಿ, ಕೃತಿಶ್ರೇಣಿ, ೩:೩.೨೩).

ಅಮೆರಿಕ ದೇಶದ ಚಿಕಾಗೋ ಪಟ್ಟಣದಲ್ಲಿ ಅವರಿಗೆ ಕೆಲವು ಅಹಿತಕರವಾದ ಅನುಭವಗಳಾದುವು. ಅವುಗಳಲ್ಲಿ ಒಂದು ಹೀಗಿದೆ: ಸರ್ವಧರ್ಮ ಸಮ್ಮೇಳನದ ಸಂದರ್ಭದಲ್ಲಿ ಏರ್ಪಡಿಸಿದ್ದ ಮೇಳವೊಂದನ್ನು ನೋಡುತ್ತಾ ನಡೆಯುತ್ತಿದ್ದ ಸ್ವಾಮೀಜಿಯ ಪೇಟವನ್ನು ಯಾರೋ ಹಿಂದಿನಿಂದ ಎಳೆದರು. ಸ್ವಾಮೀಜಿ ಹಿಂದಿರುಗಿ ನೋಡಿದರೆ ಹಾಗೆ ಎಳೆದವರು ಚೆನ್ನಾಗಿ ಉಡುಪು ಧರಿಸಿದ್ದ ಸಜ್ಜನರೊಬ್ಬರು. ಸ್ವಾಮೀಜಿ ಅವರನ್ನು ಮಾತನಾಡಿಸಿದರು. ಸ್ವಾಮೀಜಿಗೆ ಇಂಗ್ಲಿಷ್ ಚೆನ್ನಾಗಿ ಬರುತ್ತದೆ ಎಂದು ತಿಳಿದಾಗ ಅವರು ಕಸಿವಿಸಿಗೊಂಡರು. ಮತ್ತೊಂದು ಘಟನೆ: ಯಾರೋ ಇವರನ್ನು ಬೇಕೆಂದೇ ನೂಕಿದರು. ಯಾಕೆ ಹೀಗೆ ಮಾಡಿದಿರಿ ಎಂದು ಕೇಳಿದಾಗ ಅವರು ಸ್ವಾಮೀಜಿಯನ್ನು "ನೀವೇಕೆ ನಮ್ಮಂತೆ ಬಟ್ಟೆ ಧರಿಸಿಲ್ಲ?" ಎಂದು ಕೇಳಿದರು. ಈ ಎರಡು ಘಟನೆಗಳನ್ನು ವಿಶ್ಲೇಷಿಸಿ ಸ್ವಾಮೀಜಿ ಹೇಳುತ್ತಾರೆ:

"ಈ ಇಬ್ಬರು ವ್ಯಕ್ತಿಗಳ ಸಹಾನುಭೂತಿ ಭಾಷೆ, ವೇಷಭೂಷಣ ಇವುಗಳಿಗೆ ಸೀಮಿತವಾಗಿತ್ತು. ಶಕ್ತಿಯುತ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ ನಡೆಸುವ ದಬ್ಬಾಳಿಕೆಯ ಹಿಂದೆ ಈ ರೀತಿಯ ಸೀಮಿತ ಪೂರ್ವಾಗ್ರಹಗಳು ಕಾರಣವಾಗಿರುತ್ತವೆ. ಬಟ್ಟೆಯ ವಿಷಯದಲ್ಲಿ ಬೇಸರಗೊಂಡು ನನ್ನನ್ನು ಹಾಗೆ ಕೆಟ್ಟದಾಗಿ ನಡೆಸಿಕೊಂಡವನು ಒಳ್ಳೆಯ ವ್ಯಕ್ತಿಯೇ ಆಗಿರಬಹುದು. ಆತ ಒಳ್ಳೆಯ ತಂದೆ, ಒಳ್ಳೆಯ ಪ್ರಜೆ ಆಗಿರಬಹುದು. ಆದರೆ ತನಗಿಂತ ಬೇರೆ ರೀತಿಯಾದ ಉಡುಪು ಧರಿಸಿದವನನ್ನು ಕಂಡಕೂಡಲೆ ಅವನ ಸ್ವಭಾವದ ಒಳ್ಳೆಯತನ ಬತ್ತಿಹೋಯಿತು."

## ಪಶ್ಚಿಮದ ಬಗ್ಗೆ ಸ್ವಾಮೀಜಿಗಿದ್ದ ಅಭಿಮಾನ

ಈ ಸಂದರ್ಭದಲ್ಲಿ ಸ್ವಾಮೀಜಿ ಮೇಲಿನ ಘಟನೆಗಳನ್ನು ವಿಶ್ಲೇಷಿಸಿ, ವ್ಯಕ್ತಿಯು ಸಂಸ್ಕೃತಿಯ ಇತಿಮಿತಿಗಳನ್ನು ಅವಲಂಬಿಸಿರುವ ರೀತಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿರುವುದನ್ನು ಕಾಣಬಹುದು. ಅಮೆರಿಕ ದೇಶದ್ದು ಭೋಗಸಂಸ್ಕೃತಿ ಎಂದು ಭಾರತೀಯರು ತಿರಸ್ಕಾರ ಮನೋಭಾವದಿಂದ ನೋಡಿದ್ದು ಸ್ವಾಮೀಜಿಯ ಗಮನಕ್ಕೆ ಬಂದಿರಬೇಕು. ಅಮೆರಿಕವು ಶ್ರೀಮಂತಿಕೆಯಲ್ಲಿ ಮುಳುಗಿದ್ದುದನ್ನು ಸಾಕ್ಷಾತ್ತಾಗಿ ಕಂಡವರು ಅವರು. ಐಶ್ವರ್ಯದ ಆಧಿಕ್ಯ ಒಂದು ದೇಶವನ್ನು ಅಧಃಪತನಕ್ಕೆ ಒಯ್ಯುತ್ತದೆ ಎಂದೇನೂ ಸ್ವಾಮೀಜಿ ಭಾವಿಸಲಿಲ್ಲ. ದೂರದರ್ಶಿಯಾದ ಅವರಿಗೆ ಭೋಗದ ಅಂತಿಮ ಸ್ಥಿತಿ ಏನು ಎಂಬುದು ಸ್ಪಷ್ಟವಾಗಿ ಗೋಚರವಾಗಿತ್ತು. ಅವರು ಹೇಳಿದರು:

"ಪಶ್ಚಿಮದ—ಯೂರೋಪ್ಪು, ಅಮೆರಿಕ ದೇಶಗಳ—ನೆಲ ಈಗ ಬಿತ್ತನೆಗೆ ಹಸನಾಗಿದೆ. ಅಲ್ಲಿ ಜನ ಭೋಗದ ಶಿಖರವನ್ನು ಮುಟ್ಟಿದ್ದಾರೆ... ಭೋಗ ಅತಿ ತೃಪ್ತಿಯನ್ನು ತಂದಾಗ ಅವರು ಯೋಗದ ಬೋಧನೆಯನ್ನು ಅರ್ಥಮಾಡಿಕೊಳ್ಳುತ್ತಾರೆ." (ಕೃತಿಶ್ರೇಣಿ, ೬:೧೪೨).

ಸ್ವಾಮೀಜಿ ಪಶ್ಚಿಮವನ್ನು ಆಳವಾಗಿ ಪ್ರೀತಿಸುತ್ತಿದ್ದರು. ಅದು ಗುಪ್ತಪ್ರೇಮವಲ್ಲ. ಬಹಿರಂಗ ಪ್ರೇಮ. ಅವರ ಈ ಮಾತುಗಳಲ್ಲಿ ಅದು ವ್ಯಕ್ತವಾಗಿದೆ: "ಸಾಮಾಜಿಕ, ರಾಜಕೀಯ ಅಥವಾ ಆಧ್ಯಾತ್ಮಿಕ ಸ್ವಾಸ್ಥ್ಯವು ನೆಲೆಗೊಳ್ಳಲು ಸಾಧ್ಯವಿರುವುದು ಒಂದೇ ಆಧಾರದ ಮೇಲೆ—ಅದು ನಾನೂ ನನ್ನ ಸೋದರರೂ ಒಂದೇ ಎಂಬುದನ್ನು ಅರಿಯುವುದು. ಎಲ್ಲ ದೇಶಗಳ, ಎಲ್ಲ ಜನಗಳ ವಿಷಯದಲ್ಲೂ ಇದು ನಿಜ. ಪಾಶ್ಚಾತ್ಯನು ಪೌರಸ್ತ್ಯನಿಗಿಂತ ಬೇಗ ಇದನ್ನು ಅರಿತುಕೊಳ್ಳುವನೆಂದು ನಾನು ಹೇಳುತ್ತೇನೆ" (ಕೃತಿಶ್ರೇಣಿ, ೪:೩೧೫).

ಸ್ವಾಮಿ ವಿವೇಕಾನಂದರು ತಮ್ಮ ಬದುಕಿನ ಅಮೂಲ್ಯವಾದ ವರ್ಷಗಳನ್ನು ಪಶ್ಚಿಮದ ಮೇಲ್ಮೆಗಾಗಿ ವಿನಿಯೋಗಿಸಿದರು. ಹಾಗೇಕೆ ಮಾಡಿದರು ಎಂಬ ಪ್ರಶ್ನೆಗೆ ಅವರೇ ಉತ್ತರ ನೀಡಿದ್ದಾರೆ: "ಯಾರಾದರೂ ತನ್ನ ದೇಶಕ್ಕೆ ಮಾತ್ರವಲ್ಲದೆ, ಇಡೀ ಮಾನವತೆಗೆ ಒಳಿತನ್ನು ಮಾಡಬಯಸಿದರೆ, ಅಂಥವರ ಕಾರ್ಯಕ್ಷೇತ್ರ ಪಶ್ಚಿಮವೇ ಸರಿ" (ಕೃತಿಶ್ರೇಣಿ, ೪:೨೭೯).

> ಸಮಾನತೆ, ಸ್ವಾತಂತ್ರ್ಯ, ಕ್ರಿಯೆ, ಶಕ್ತಿ ಇವುಗಳಲ್ಲಿ ಪಾಶ್ಚಾತ್ಯರನ್ನು ಕೂಡ ಮೀರಿಸಿ, ಅದೇ ಸಂದರ್ಭದಲ್ಲಿ ಧಾರ್ಮಿಕ ಸಂಸ್ಕೃತಿ ಮತ್ತು ಸ್ವಭಾವಗಳಲ್ಲಿ ನೀವು ಪೂರ್ಣ ಭಾರತೀಯರಾಗಬಲ್ಲಿರಾ? ಇದನ್ನು ನೆರವೇರಿಸಬೇಕಾಗಿದೆ.
>
> *–ಸ್ವಾಮಿ ವಿವೇಕಾನಂದ*

## ಸ್ವಾಮೀಜಿ ಕಂಡ ಪೂರ್ವ- ಪಶ್ಚಿಮ ಮಿಲನ

ಸ್ವಾಮೀಜಿ ದೂರದರ್ಶಿಯಾದ ಪ್ರವಾದಿ. ಇಂದು ನಾವು ಇಡೀ ಭೂಮಂಡಲವೇ ಒಂದು ಹಳ್ಳಿ (global village) ಎಂಬ ಮಾತನ್ನು ಬಳಸುತ್ತೇವೆ. ಖಂಡಖಂಡಗಳ ನಡುವಣ ವ್ಯತ್ಯಾಸ ಅಳಿಸಿಹೋಗುತ್ತದೆ ಎಂಬುವನ್ನು ನೂರು ವರ್ಷಗಳ ಹಿಂದೆ ಸ್ವಾಮೀಜಿ ಕಂಡರು. "ಪಶ್ಚಿಮವು ಯಾವ ಭಾವನೆಗಳನ್ನು ಪೋಷಿಸುತ್ತದೆಯೋ ಅವು ಪೂರ್ವದ ನೆಲವನ್ನು ಆಕ್ರಮಿಸುತ್ತವೆ. ಪಶ್ಚಿಮದ ಇಂದಿನ ಮೌಲ್ಯಗಳು ಪೂರ್ವದ ನಾಳಿನ ಮೌಲ್ಯಗಳಾಗುತ್ತವೆ." (Pravrajika Vrajaprana : 'A Voice without Form', *Vedanta Kesari*, Madras 1994, p.137)

"ಯೂರೋಪು ಯಾವಾಗಲೂ ಸಾಮಾಜಿಕ ಶಕ್ತಿಗೆ ಕೇಂದ್ರ, ಏಷ್ಯವು ಆಧ್ಯಾತ್ಮಿಕ ಶಕ್ತಿಗೆ ಕೇಂದ್ರವಾಗಿದೆ. ಈ ಎರಡು ಶಕ್ತಿಗಳ ಸಂಯೋಗದಲ್ಲಿ ಇರುವ ತರತಮವೇ ಇಡೀ ವಿಶ್ವದ ಚರಿತ್ರೆ. ಮಾನವಕೋಟಿಯ ಇತಿಹಾಸದಲ್ಲಿ ಬೇರೊಂದು ಪುಟವು ನಿಧಾನವಾಗಿ ತೆರೆಯುತ್ತಿದೆ. ಅದರ ಚಿಹ್ನೆ ಎಲ್ಲೆಡೆಯಲ್ಲಿಯೂ ಕಾಣುವುದು. ನೂರಾರು ಹೊಸ ಯೋಜನೆಗಳು ಸೃಷ್ಟಿಯಾಗಿ ನಾಶವಾಗುವುವು. ಯೋಗ್ಯವಾಗಿರುವುದು ಮಾತ್ರ ಉಳಿಯುವುದು. ಸತ್ಯವೂ ಶುಭವೂ ಆದುದಲ್ಲದೆ ಮತ್ತಾವುದು ಯೋಗ್ಯ?" (ಕೃತಿಶ್ರೇಣಿ, ೪:೩೬೦)

ಸ್ವಾಮೀಜಿ ಪಶ್ಚಿಮವನ್ನೂ ಅದರ ಸಂಸ್ಕೃತಿಯನ್ನೂ ಎಷ್ಟೇ

ಮೆಚ್ಚಿದ್ದರೂ ಭಾರತೀಯರು ತಮ್ಮ ಸಂಸ್ಕೃತಿಗೆ ಬದ್ಧರಾಗಿರಬೇಕೆಂದು ಒತ್ತಿಹೇಳುತ್ತಿದ್ದರು: "ಯೂರೋಪಿನ ಜನಕ್ಕೆ ಕೇವಲ ಕೆಲವೇ ಶತಮಾನಗಳ ಸಂಸ್ಕೃತಿಯನ್ನು ಬಿಡಲು ಸಾಧ್ಯವಾಗುತ್ತಿಲ್ಲ. ಹಾಗಿರುವಾಗ ಅನೇಕಾನೇಕ ಶತಮಾನಗಳ, ಜ್ವಾಜ್ವಲ್ಯಮಾನವಾದ ನಿಮ್ಮ ಸಂಸ್ಕೃತಿಯನ್ನು ಬಿಡಲು ನಿಮಗೆ ಸಾಧ್ಯವಾಗುತ್ತವೆಯೇ?" "ಜಾತಿಪದ್ಧತಿಯನ್ನು ನುಚ್ಚುನೂರು ಮಾಡಿ" ಎಂದು ಹೇಳಿದ ಸ್ವಾಮೀಜಿ, ಏಕತ್ವ, ಸಮದರ್ಶಿತ್ವಗಳನ್ನು ಒತ್ತಿಹೇಳಿದ ವೇದಾಂತವು, ಧಾರ್ಮಿಕರೂ, ದೇವರನ್ನು ಪ್ರೀತಿಸುವವರೂ ಆದ ಭಾರತೀಯರನ್ನು ಸುವರ್ಣಯುಗಕ್ಕೆ ಕೊಂಡೊಯ್ಯುತ್ತದೆ ಎಂದರು. ಮೇಸಿ ಕ್ಲೇ ಹೇಳುತ್ತಾರೆ : "ಭಾರತದ ಆಧ್ಯಾತ್ಮಿಕ ಶಕ್ತಿಯು ಪಶ್ಚಿಮದ ದೇಹದ ರಕ್ತನಾಳದಲ್ಲಿ ಪರಿಯುವಂತೆ ಮಾಡಲು ಶ್ರಮಿಸಿದಂತೆಯೇ ಅವರು ಪಶ್ಚಿಮದ ಉದಾರವಾದ ಪ್ರಜಾಪ್ರಭುತ್ವ ಶಕ್ತಿಯು ಭಾರತದ ಪ್ರಜ್ಞೆಯನ್ನು ಪ್ರವೇಶಿಸುವಂತೆ ಮಾಡಲು ಶ್ರಮಿಸಿದರು."

ಪಶ್ಚಿಮಕ್ಕೆ ಅದರಲ್ಲೂ ಇಂಗ್ಲೆಂಡ್ ಮತ್ತು ಯೂರೋಪ್‌ಗಳಿಗೆ ನಾಗರಿಕತೆಯನ್ನು ನೀಡಿದ್ದು ಗ್ರೀಸ್ ದೇಶ. "ಇಂದು ಪ್ರಾಚೀನ ಗ್ರೀಸ್ ದೇಶವು ಭಾರತದ ನೆಲದ ಮೇಲೆ ಪ್ರಾಚೀನ ಹಿಂದುವನ್ನು ಸಂಧಿಸುತ್ತಿದೆ" ಎಂದರು ಸ್ವಾಮೀಜಿ. ಹೀಗೆ ಪೂರ್ವ-ಪಶ್ಚಿಮಗಳ ಸಂಸ್ಕೃತಿ, ನಾಗರಿಕತೆ ಮತ್ತು ವೈಜ್ಞಾನಿಕ ಮನೋಭಾವಗಳ ಸಂಗಮವನ್ನು ಅವರು ಬಯಸಿದರು.

> "ಸಮುದ್ರದ ಆಚೆಗಿರುವ ನಮ್ಮ ಎಲ್ಲ ನೆರೆಹೊರೆಯವರೂ, ತುಂಬ ಮೂಲೆಯಲ್ಲಿರುವವರೂ ಕೂಡ, ನಮ್ಮ ಬಂಧು ವರ್ಗದವರು; ಬಣ್ಣ, ಭಾಷೆ ಮತ್ತು ಆಚರಣೆಗಳಲ್ಲಿ ಎಲ್ಲೋ ಸ್ವಲ್ಪ ವ್ಯತ್ಯಾಸವಿದೆ ಅಷ್ಟೆ ಎಂಬುದನ್ನು ಸ್ವಾಮಿ ವಿವೇಕಾನಂದರು ನಿರ್ಣಾಯಕವಾಗಿ ಪ್ರಮಾಣೀಕರಿಸಿದರು."
>
> —*ಡೆಟ್ರಾಯಿಟ್ ಫ್ರೀ ಪ್ರೆಸ್.* (Detroit Free Press)

ಭಾರತೀಯರು ಪಶ್ಚಿಮದಿಂದ ನಾಲ್ಕು ವಿಷಯಗಳಲ್ಲಿ ಪಾಠ ಕಲಿಯಬೇಕಾಗಿದೆ ಎಂಬುದು ಸ್ವಾಮೀಜಿಯ ಅಭಿಪ್ರಾಯವಾಗಿತ್ತು. ಅವು : ವಿಜ್ಞಾನ, ಸಂಘಟನಾ ಕೌಶಲ, ಎಡೆಬಿಡದೆ ಶ್ರಮಿಸುವ ಕಲೆ ಮತ್ತು ಸಮಾನತೆ. ಅವರು ಹೇಳಿದರು: "ಭಾರತವು ಪಾಶ್ಚಾತ್ಯರ ಪದತಲದಲ್ಲಿ ಕುಳಿತು ಯಂತ್ರಗಳನ್ನು ತಯಾರಿಸುವುದನ್ನು ಕಲಿಯಬೇಕು. ಹಾಗೆಯೇ ಪಾಶ್ಚಾತ್ಯರು ಪೌರಸ್ತ್ಯರ ಪದತಲದಲ್ಲಿ ಕುಳಿತು ಧರ್ಮ-ಅಧ್ಯಾತ್ಮಗಳನ್ನು ಕಲಿಯಬೇಕು." ಅಮೆರಿಕ ದೇಶದ ಡೆಟ್ರಾಯಿಟ್ ನಗರದಲ್ಲಿ ಏರ್ಪಾಟಾಗಿದ್ದ ಒಂದು ಭೋಜನ ಕೂಟದಲ್ಲಿ ಸ್ವಾಮಿ ವಿವೇಕಾನಂದರು ಪೂರ್ವ-ಪಶ್ಚಿಮ ಸಂಸ್ಕೃತಿ ಸಮನ್ವಯವನ್ನು ಕುರಿತು ಕಳಕಳಿಯಿಂದ ಮಾತನಾಡಿದರು. ಅವರ ಮಾತುಗಳನ್ನು ಕೇಳಿದವರೊಬ್ಬರು ಅದರ ಸಾರಾಂಶವನ್ನು ನಮಗೆ ನೀಡಿದ್ದಾರೆ: "ಸ್ವಾಮಿ ವಿವೇಕಾನಂದರು ತಮ್ಮ ಜೀವಿತೋದ್ದೇಶ ಏನು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿದರು. ಮಾನವತೆಯನ್ನು ಪ್ರೀತಿಸುವ ಪ್ರತಿಯೊಬ್ಬರೂ ಅದನ್ನು ಒಪ್ಪಬೇಕಾದದ್ದೇ. ನಮ್ಮ ಲೌಕಿಕತೆಯ ದರ್ಶನ ಮತ್ತು ಲೌಕಿಕ ಪ್ರಗತಿಯ ಫಲಗಳನ್ನು ಹಿಂದೂ ನಾಗರಿಕತೆಯು ಹೀರಿಕೊಳ್ಳತಕ್ಕದ್ದು. ಜೊತೆಗೆ (ಪಾಶ್ಚಾತ್ಯರಾದ) ನಾವೂ ಅದರಿಂದ, ನಾವೆಲ್ಲ ಆರ್ಯಸೋದರರು, ನಮಗೊಂದು ಸಮಾನವಾದ ನಾಗರಿಕತೆಯಿದೆ ಎಂದು ಕಲಿಯುವವರೆಗೂ, ಅದರಿಂದ ಪಾಠಗಳನ್ನು ಪಡೆಯತಕ್ಕದ್ದು."

## ಸಮನ್ವಯ ಮೂರ್ತಿ

ರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದಜಿಯವರ ಈ ಮುಂದಿನ ಮಾತುಗಳು ಸ್ವಾಮಿ ವಿವೇಕಾನಂದರ ಸಂಕೀರ್ಣ ಮತ್ತು ಸಮನ್ವಯ ವ್ಯಕ್ತಿತ್ವವನ್ನು ಶಕ್ತಿಪೂರ್ಣವಾಗಿ ವರ್ಣಿಸುತ್ತವೆ:

"ಅವರ (ಸ್ವಾಮಿ ವಿವೇಕಾನಂದರ) ಸಮಗ್ರ ಸಂದೇಶವು— ವಿಜ್ಞಾನ ಮತ್ತು ಧರ್ಮ, ವಿಚಾರ ಮತ್ತು ಶ್ರದ್ಧೆ, ಲೌಕಿಕ ಮತ್ತು ಪಾರಲೌಕಿಕ, ಆಧುನಿಕ ಮತ್ತು ಪ್ರಾಚೀನ, ಪೂರ್ವ ಮತ್ತು ಪಶ್ಚಿಮ ಇವನ್ನೆಲ್ಲ ಸಮನ್ವಯಗೊಳಿಸುತ್ತದೆ, ಸಂಗಮಗೊಳಿಸುತ್ತದೆ. ಆ ಸಮನ್ವಯ, ಸಂಗಮಗಳ ಸಾಕಾರ ಸ್ವರೂಪರಾಗಿದ್ದರು, ಅವರು. ಮಾನವನ ನಾಗರಿಕತೆಯ ಇತಿಹಾಸದಲ್ಲಿ ಅವರ ಜೀವನ ಮತ್ತು ಸಂದೇಶಗಳು ಅಂತಹ ಸಮನ್ವಯಕ್ಕೆ ಅಗತ್ಯವಾದ ಚಾಲನ ಶಕ್ತಿಯನ್ನು ನೀಡುತ್ತವೆ." (*East and West in Swami Vivekananda*, Edited by Swami Ghanananda).

ಧೈರ್ಯ ಮತ್ತು ಶಕ್ತಿ ಎಂಬುವು ಸ್ವಾಮೀಜಿಯ ಪಾಲಿಗೆ, ಇನ್ನೇನು ಮುಳುಗಿಯೇ ಹೋಗಲಿದ್ದ ತಮ್ಮ ದೇಶಬಾಂಧವರನ್ನು ಮೇಲೆತ್ತಲು ಇದ್ದ ಮಂತ್ರಗಳು. **ಇಲಸ್ಟ್ರೇಟೆಡ್ ಲಂಡನ್ ನ್ಯೂಸ್** ಎಂಬ ಪತ್ರಿಕೆಯಲ್ಲಿ ತಾವು ನೋಡಿದ್ದ ಚಿತ್ರವೊಂದನ್ನು ಬಳಸಿ ಅವರು ತಮ್ಮ ಸಂದೇಶವನ್ನು ಜನರ ಕಣ್ಣಿಗೆ ಕಟ್ಟುವಂತೆ ಮಾಡುತ್ತಿದ್ದರು. ದಕ್ಷಿಣ ಸಮುದ್ರದ ದ್ವೀಪಗಳಲ್ಲಿ (South Sea Islands) ಕೆಲವು ಹಡಗುಗಳು ಭಾರೀ ಚಂಡಮಾರುತಕ್ಕೆ ಸಿಕ್ಕಿಕೊಂಡುವು. "ಒಂದೇ ಒಂದು ಹಡಗನ್ನುಳಿದು ಇನ್ನೆಲ್ಲ ಮುಳುಗೇ ಹೋದುವು" ಎಂದರು ಸ್ವಾಮೀಜಿ. "ಆ ಹಡಗು ಇಂಗ್ಲಿಷರದು. ಅದರಲ್ಲಿ ಪ್ರಯಾಣ ಮಾಡುತ್ತಿದ್ದವರು ಜೀವ ಉಳಿಸಿಕೊಳ್ಳಲು ಹೋರಾಡುತ್ತಿದ್ದರು. ಅಂಥದರಲ್ಲಿ ಇನ್ನೇನು ಜೀವ ಕಳೆದುಕೊಳ್ಳುವುದರಲ್ಲಿದ್ದ ಕೆಲವರು ಹಡಗಿನ ಡೆಕ್ಕಿನ ಮೇಲೆ ನಿಂತು ಬಿರುಗಾಳಿಯಲ್ಲಿ ಜೀವ ಉಳಿಸಿಕೊಳ್ಳಲು ಹೋರಾಡುತ್ತಾ ತೇಲುತ್ತಿದ್ದವರನ್ನು ಉಚ್ಚಕಂಠದಲ್ಲಿ ಪ್ರೋತ್ಸಾಹಿಸುತ್ತಿದ್ದರು." ಆ ಚಿತ್ರವನ್ನು ನೆನೆಯುತ್ತಾ ಸ್ವಾಮೀಜಿ, "ಹಾಗೆ ಪ್ರೋತ್ಸಾಹಿಸುತ್ತಿದ್ದವರಂತೆ ಧೈರ್ಯಶಾಲಿಗಳಾಗಿರಿ, ಉದಾರ ಹೃದಯಿಗಳಾಗಿರಿ" ಎಂದು ತಮ್ಮ ದೇಶಬಾಂಧವರಿಗೆ ಕರೆಯಿತ್ತರು.

ಸ್ಥಳದಾನ : ಶ್ರೀ ಚಂದ್ರಕಾಂತ್ ಎ.ಎಸ್., ಬೆಂಗಳೂರು